

## ನಿರ್ದೇಶಕ ಹ್ಯಾನಿ ಅಬುಅಸಾದ್

ಹ್ಯಾನಿ ಅಬುಅಸಾದ್ ಪ್ಯಾಲಸ್ತೀನ್‌ನವರು. ಇಸ್ರೇಲ್ ಪೌರತ್ವ ಪಡೆದಿದ್ದಾರೆ. 1981ರಲ್ಲಿ ಅವನು ಹಾಲೆಂಡ್‌ಗೆ ವಲಸೆ ಹೋಗಿ,ಅಲ್ಲಿ ಹಾರ್ಲೆಮ್ ನಲ್ಲಿ ಏರೊಡೈನಾಮಿಕ್ಸ್ ವಿಷಯದಲ್ಲಿ ಕಲಿತರು. ಕೆಲವು ವರ್ಷ ವಿಮಾನ ಎಂಜಿನಿಯರ್ ಆಗಿ ಕೆಲಸ ಮಾಡಿದರು. ಹುಟ್ಟಿನಿಂದ ಇಸ್ರೇಲಿ ಆದರೂ ತಮ್ಮನ್ನು ತಾವು ಪಾಲಸ್ತೇನಿಯನ್ ಎಂದೇ ಅವರು ಹೇಳಿಕೊಳ್ಳುತ್ತಾರೆ. ಮೈಕಲ್ ಖಲೀಫ್ ಸಿನಿಮಾ ನೋಡಿ ಚಿತ್ರರಂಗದಲ್ಲಿ ಆಸಕ್ತಿ ತಳೆದ ಅವರು, ಮೊದಲು ಚಾನೆಲ್ 4 ಹಾಗೂ ಬಿಬಿಸಿಗೆ ಕಾರ್ಯಕ್ರಮಗಳನ್ನು ರೂಪಿಸಿ ಅನುಭವ ಪಡೆದುಕೊಂಡರು. 1990ರಲ್ಲಿ ಅಯ್ಲೋಯ್ಲ್ ಎಂಬ ಚಿತ್ರ ನಿರ್ಮಾಣ ಸಂಸ್ಥೆಯನ್ನು ಪ್ಯಾಲಸ್ತೇನ್‌ನ ಮತ್ತೊಬ್ಬ ಚಿತ್ರ ತಯಾರಕ ರಶೀದ್ ಮಶಾರವಿ ಅವರ ಸಹಭಾಗಿತ್ವದಲ್ಲಿ ಪ್ರಾರಂಭಿಸಿದರು.

1992ರಲ್ಲಿ ಅಬುಅಸಾದ್ 'ಪೇಪರ್ ಹೌಸ್' ಎಂಬ ಕಿರುಚಿತ್ರವನ್ನು ಬರೆದು, ಚಿತ್ರೀಕರಿಸಿದರು. ಅದಕ್ಕೆ ಹಲವು ಅಂತರರಾಷ್ಟ್ರೀಯ ಪ್ರಶಸ್ತಿಗಳು ಸಂದವು. 1998ರಲ್ಲಿ 'ದಿ ಫೋರ್ಟೀನ್ತ್ ಚಿಕ್' ಎಂಬ ಸಿನಿಮಾ ನಿರ್ದೇಶಿಸಿದರು. ಇದು ಅವರ ನಿರ್ದೇಶನದ ಚೊಚ್ಚಿಲ ಚಲನಚಿತ್ರ.

2006ರಲ್ಲಿ 'ಪ್ಯಾರಡೈಸ್ ನೌ' ತೆರೆಕಂಡಿತು. ಅದಕ್ಕೆ ಅಕಾಡೆಮಿ ಪ್ರಶಸ್ತಿ ಸಂದಿತು. 2013ರಲ್ಲಿ ಅವರು ನಿರ್ದೇಶಿಸಿದ 'ಒಮರ್' ಚಿತ್ರವೂ ಅಕಾಡೆಮಿ ಪ್ರಶಸ್ತಿಗೆ ಪರಿಗಣಿತವಾದ ಸಿನಿಮಾಗಳ ಪಟ್ಟಿಯಲ್ಲಿತ್ತು.

ಹೇಳುವ ಕುತೂಹಲಕಾರಿ ನಿರೂಪಣಾ ತಂತ್ರದ ಸಿನಿಮಾ ಇದು.

ಪ್ಯಾಲಸ್ತೇನ್‌ನಲ್ಲಿ ಹುಟ್ಟಿ, ಮೊರಕ್ಕೊದಲ್ಲಿ ಬೆಳೆದ ಸುಹಾ ಇನ್ನೊಂದು ಆಸಕ್ತಿಕರ ಪಾತ್ರ. ಅವಳು ಹಾಗೂ ಸೈಯದ್ ನಡುವೆ ಪ್ರೇಮಾಂಕುರವಾಗುತ್ತದೆ. ಸ್ಥಳೀಯ ನಾಯಕನ ಮಗಳಾದ ಅವಳಿಗೆ ಸಮಾಜದಲ್ಲಿ ಘನತೆ ಇದೆ. ಇಸ್ರೇಲರ ವಿರುದ್ಧ ಪ್ಯಾಲಸ್ತೇನಿಯನ್ನರ ಅಸ್ತಿತ್ವಕ್ಕಾಗಿ ನಡೆಯುತ್ತಿರುವ ಹೋರಾಟದ ಅರಿವಿರುವ ಅವಳು ಆತ್ಮಹತ್ಯಾ ಬಾಂಬ್‌ನಿಂದ ಪ್ರಯೋಜನವಿಲ್ಲ ಎಂಬ ನಿಲುವಿನವಳು. ಆ ಇಬ್ಬರೂ ಯುವಕರು ಸುವ್ಯವಸ್ಥಿತ ತರಬೇತಿ ಪಡೆದುಕೊಂಡು, ಆತ್ಮಹತ್ಯಾ ದಾಳಿಗೆ ಹೊರಡುತ್ತಾರೆ. ಗಡಿ ದಾಟಿ ಇಸ್ರೇಲ್ ತಲುಪಿದ ಮೇಲೆ ಅವರಂದುಕೊಂಡ ಯೋಜನೆ ಏರುಪೇರಾಗುತ್ತದೆ. ಆಮೇಲೆ ಇಬ್ಬರೂ ಸ್ನೇಹಿತರು ಬೇರೆ ಬೇರೆಯಾಗುತ್ತಾರೆ. ಒಬ್ಬ ಮೂಲ ನೆಲೆಗೆ ಮರಳುತ್ತಾನೆ. ಸ್ನೇಹಿತನನ್ನು ತಾನೇ ಹುಡುಕಿ, ಆತ್ಮಹತ್ಯಾ ದಾಳಿಯನ್ನೂ ನಡೆಸುವುದಾಗಿ ಸಂಸ್ಥೆಯವರಿಗೆ ಭರವಸೆ ಕೊಡುತ್ತಾನೆ. ಇಸ್ರೇಲ್‌ಸೇನೆಯವರ ಕಣ್ಣಿಗೆ ಬಿದ್ದಮೇಲೆ ತಪ್ಪಿಸಿಕೊಂಡು ಹೋಗುವ ಅವರಿಬ್ಬರೂ ಮತ್ತೆ ಸಂಧಿಸುತ್ತಾರೆ. ಸುಹಾಳ ಪ್ರೀತಿಮಾತಿನ ಹಂಗಿನಲ್ಲಿ ಸೈಯದ್ ಮನಸ್ಸು ಬದಲಿಸಬೇಕು ಎಂದುಕೊಳ್ಳುತ್ತಾನೆ. ಅವನ ಸ್ನೇಹಿತ ತಮ್ಮಿಬ್ಬರ ಉದ್ದೇಶವನ್ನು ಮತ್ತೆ ಮನವರಿಕೆ ಮಾಡಿಕೊಡುತ್ತಾನೆ.

ಸೇನೆಯವರು ಹೆಚ್ಚಾಗಿ ಇರುವ ಬಸ್‌ಗೆ ದಾಳಿ ನಡೆಸಬೇಕು ಎಂಬ ಮೊದಲ ಯೋಜನೆಯನ್ನು